ಸಾಕಷ್ಟು ಸಲ ತಿಳಿಸಿ ಹೇಳಿದ್ದೆನಾದರೂ ಕಲ್ಲವ್ವ ಮಾತ್ರ ಕೇಳಿರಲಿಲ್ಲ. ಆದರೆ, ಈಗೀಗ ವಯಸ್ಸಾದ ಕಾರಣ ತುಸು ಮೆತ್ತಗಾಗಿದ್ದಳು. ಈಗ, ಇದನ್ನೇ ನೆಪವಾಗಿಟ್ಟುಕೊಂಡು ಆಕೆಯ ನಿರ್ಧಾರವನ್ನು ಹೇಗಾದರೂ ಮಾಡಿ ಬದಲಿಸಿ ಹೊಟ್ಟೆ- ಬಟ್ಟೆ, ಜಡ್ಡು ಜಾಪತ್ರೆ ಅಂತ ನೆಪವೊಡ್ಡಿ ನನ್ನೊಂದಿಗೆ ಕರೆದುಕೊಂಡು ಹೋಗಬೇಕು. ಆ ಮೂಲಕ ಒಡಕಿ ಮ್ಯಾಲಿನ ಕಲ್ಲವ್ವನ ಜಮೀನನ್ನು ನನ್ನದಾಗಿಸಿಕೊಳ್ಳಬೇಕೆಂದು ಮನದೊಳಗೆ ನಿರ್ಧರಿಸಿಕೊಂಡು ಬಂದು ಆಕೆಯ ಎದುರಿನಲ್ಲಿ ಕುಂತಿದ್ದೆ.

ಇದುವರೆಗೂ ತಾನು ದಾಟಿ ಬಂದ ಬದುಕಿನ ತಳವನ್ನು ಶೋಧಿಸುತ್ತ ಶೂನ್ಯದಲ್ಲಿ ದೃಷ್ಟಿ ನೆಟ್ಟು ಕುಂತಿದ್ದ ಕಲ್ಲವ್ವನ ಕಿವಿಯ ಮೇಲೆ ಗೋಡೆ ಮೇಲಿದ್ದ ಹಲ್ಲಿಯ 'ಲೊಚ್... ಲೊಚ್...' ಎಂಬ ಶಬ್ದ ಬೀಳುತ್ತಿದ್ದಂಗೆ 'ಹ್ಞಾಂ...' ಎನ್ನುತ್ತ ಸರಕ್ಕನೆ ವಾಸ್ತವಕ್ಕೆ ಬಂದಳು. ಹಾಗೇ ಸುತ್ತಲೂ ಕಣ್ಣಾಡಿಸುತ್ತ ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟಳು. ನಂತರ, ನನ್ನತ್ತ ದೃಷ್ಟಿ ನೆಟ್ಟು,

'ಮಲ್ಲಣ್ಣ, ಅರಾಮಿದ್ದಿ ಏನು? ಭಾಳs ದಿನಗಳ ಮ್ಯಾಲೆ ನನ್ನ ನೆಪ್ಪಾತೆನು?'

ಕಲ್ಲವ್ವ ತುಟಿಯೊಳಗೆ ವ್ಯಂಗ್ಯವಾಗಿ ನಗುತ್ತ ಕೇಳಿದಳು. ಇದರಿಂದ ತುಸು ಗಲಿಬಿಲಿಗೊಳಗಾದ ನಾನು ಸಾವರಿಸಿಕೊಳ್ಳುತ್ತ,

'ಯವ್ವ, ಅರಾಮಿದ್ದಿನಿ ಬಿಡು. ಆದ್ರ , ನೀ ಹಂಗೆಲ್ಲ ಅನ್ಬ್ಯಾಡ ನೋಡು! ಮೊದ್ಲು ಆ ಮಾತು ವಾಪಸ್ ತಗೋ ತಾಯಿ... ಯಾಕ?, ಈ ವರ್ಸದಾಗ ನಿನ್ನ ನೋಡ್ಲಿಕ್ಕೆಂತ ಎಷ್ಟು ಸಲ ಬಂದು ಹೋಗೀನಿ! ನೀ ಮರತೆನು!? ನೀನೂ ಕೂಡ ನನ್ನ ಅವ್ವ ಅಲ್ಲೇನು? ನನ್ನ ಎದಿಗಿ ನಾಟಂಗ ಅಂಥ ಮಾತು ಯಾಕ ಅಂತಿಮ!? ನಿನ್ನ ನೆಪ್ಪು ಆದಾಗೆಲ್ಲ ನೋಡ್ಲಿಕ್ಕೆಂತ ನಾ ಬರಬಾರದೆನು? ಯವ್ವ, ಹಂಗೆಲ್ಲ ನನ್ನ ಅಂದು ಮನ್ಸಿಗಿ ನೋವು ಮಾಡ್ಬ್ಯಾಡ. ನನ್ಗ ಭಾಳs ತ್ರಾಸ ಆಗ್ತದ...' ಎಂದವನೆ ತುಸು ತಡೆದೆ. ಆಮೇಲೆ ಗಂಟಲನ್ನು ಸರಿಪಡಿಸಿಕೊಂಡವರಂಗೆ ಮಾಡಿ,

'ಹ್ಞಾಂ, ಯವ್ವ, ಒಂದ್ಮಾತು ಹೇಳ್ತೀನಿ ಕೇಳು... ಈ ದಿವ್ಸ ಅಂತೂ ನಾ ಹಂಗs ಹೊಳ್ಳಿ ಹೋಗ್ಬಾರದಂತ ನಿರ್ಧಾರ ಮಾಡ್ಕೊಂಡನs ಬಂದೀನಿ. ಈ ಸಲ ನನ್ನ ಕೂಡ ನೀನು ಬರಲಿಕ್ಕೆನs ಬೇಕು. ಯಾಕಂದ್ರ, ಮುಪ್ಪಿನ ಕಾಲ್ದಾಗ ಈ ಮನ್ಯಾಗ ಒಬ್ಬಕಿನs ಇದ್ದು ಏನು ಮಾಡ್ತಿ? ಇಲ್ಲಿ ನಿನ್ಗ ಏನರೆ ಹೆಚ್ಚು ಕಮ್ಮಿ ಆದ್ರ ಗತಿ ಏನು? ಈ ಊರಾಗ ನಿನ್ನವ್ರು ಅಂತನ್ನೋರು ಯಾರೂ ಇಲ್ಲ! ಅದಕ್ಕs, ನೀನು ಒಲ್ಲೆನದs ನನ್ನ ಕೂಡ ಬಂದ್ಬಿಡ್ಬೇಕು. ಯಾವುದs ಕಾರಣಕ್ಕೂ ನಿನ್ನ ಬಿಟ್ಟು ಬರಬಾರದಂತ ಬರೋ ಮುಂದ ನನ್ನ ಹೆಂಡ್ತಿ ತಾಕೀತು ಮಾಡಿ ಕಳಿಸ್ಯಾಳು! ಅಕಿ ನಿನ್ನ ಮ್ಯಾಲೆ ಜಿಂವಾನs ಇಟ್ಕೊಂಡಾಳು. ಹಿಂಗಾಗಿ, ಮುಪ್ಪಿನ ಕಾಲ್ದಾಗ ನಿನ್ನ ಸೇವೆ ಮಾಡೋ ಭಾಗ್ಯ ನಮ್ಮಿಬ್ಬರಿಗೂ ಕೊಡ್ಬೇಕು. ಇದು ನನ್ನ ಆಶೆ ಆಗೆದವ್ವೊ...' ಎಂದು ಕಣ್ಣಿಗೆ ನೀರು ತಂದುಕೊಂಡು ಅಂದೆ.

ಕಲ್ಲವ್ವನಿಗೆ ನನ್ನ ಮಾತುಗಳನ್ನು ಕೇಳಿ ಅದೇನನ್ನಿಸಿತೋ ಏನೋ... ತುಸು ಹೊತ್ತು ಒಂದೂ ಮಾತಾಡದೆ ಸುಮ್ಮನೆ ಕುಂತಳು. ಹಾಗೇ ಮನದೊಳಗೆ ಏನೇನೋ ಲೆಕ್ಕ ಹಾಕತೊಡಗಿದಳು. ಅದಾದ ಮರುಗಳಿಗೆಯಲ್ಲಿ ದೀರ್ಘವಾದ ಉಸುರೆಳೆದುಕೊಂಡು ನಿರಾಳಳಾದಳು. ಆಗ ಆಕೆ ಒಲ್ಲದ ಮನಸ್ಸಿನಿಂದ ತುಟಿಯೊಳಗೆ ನಕ್ಕವರಂಗೆ ಮಾಡಿ,

'ಮಲ್ಲಣ್ಣ, ನೀನು ಹೇಳೂ ಮಾತು ಖರೇ ಐತಿ. ನನ್ಗರೆ ಈಗ ನಿನ್ನ ಬಿಟ್ರ ದಿಕ್ಕು ಅಂತ ಯಾರದಾರು? ನಿನ್ನದು ಸ್ವಚ್ಛ ಮನಸ್ಸು ಐತೆಂತನs ಈ ಮಾತು ಹೇಳಿದ್ಧಿ! ನಮ್ಮ ಜೊತಿಗಿ ಬಂದು ಇದ್ಬಿಡು ಅಂತ ಜುಲುಮಿ ಮಾಡ್ಲಿಕ್ಕತ್ತಿರಿ. ಇದೆಲ್ಲ ನಿಮ್ಮ ದೊಡ್ಡ ಗುಣ ಅಂದ್ಕೋತಿನಿ. ಆದ್ರ, ಮಲ್ಲಣ್ಣ, ನನ್ನ ಕ್ಷಮಾ ಮಾಡು. ಯಾಕಂದ್ರ, ನೀ ಹೇಳ್ದಂಗ ನಾ ನಿನ್ನ ಕೂಡ ಬರಂಗಿಲ್ಲ! ಯಾಕಂದ್ರ, ಈ ಮುಪ್ಪಿನ ಕಾಲ್ದಾಗ ಯಾರಿಗೂ ಒಜ್ಜಿ ಆಗಿರಬಾರದು ಅಂತ ನಿರ್ಧಾರ ಮಾಡೀನಿ...'

ಕಲ್ಲವ್ವ ಇನ್ನೂ ಏನೋ ಹೇಳುವವಳಿದ್ದಳು ಎನ್ನುವಷ್ಟರಲ್ಲಿ ಅಡುಗೆ ಮನೆಯಲ್ಲಿ, 'ಮಿಂಯಾವ... ಮಿಂಯಾವ...' ಎಂದು ಬೆಕ್ಕು ಒದರಿದಂತಾಯಿತು. ಆಗ ಆಕೆ ಆ ಮಾತನ್ನು ಅಲ್ಲೇ ಬಿಟ್ಟು, 'ಹುಶ್... ಹುಶ್...' ಎನ್ನುತ್ತ ಥಟ್ಟನೆ ಎದ್ದು ಹೋಗಿ ಅಡುಗೆ ಮನೆಯೊಳಗಿನ ಬೆಕ್ಕನ್ನು ಹೊರ ಹಾಕಿ ಬಂದು, ಮತ್ತೇ ನನ್ನ ಎದುರಿಗೆ ಕುಂತು ಮಾತಿಗಿಳಿದಳು.

'ಮಲ್ಲಣ್ಣ, ನಾ ಏನೋ ಹೇಳ್ಲಿಕಾಕತ್ತಿದ್ನೆಲ್ಲ...!? ಹ್ಞಾಂ, ಅದs... ಈಗ ತಿಂಗಳ್ದಿಂದೆ ದೇವ್ರಕೊಂಡಜ್ಜನ ಮಠದ